ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
UNIVERSITY OF HORTICULTURAL SCIENCES, BAGALKOT
I.C.A.R. - KRISHI VIGYAN KENDRA, KOLAR
ಐ.ಸಿ.ಎ.ಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ

e- NEWS LETTER / ಇ–ವಾರ್ತಾ ಪತ್ರಿಕೆ

ಸಂಚಿಕೆ: 05 | ಏಪ್ರೀಲ್–ಜೂನ್, 2021 ಇ–ವಾರ್ತಾ ಪತ್ರಿಕೆ | ಸಂಪುಟ: 14

## ಗೌರವಾನ್ವಿತ ಕುಲಪತಿಗಳ ನುಡಿಗಳು



ಡಾ. ಕೆ. ಎಮ್. ಇಂದಿರೇಶ್


ಕೊವಿಡ್ ವಿಷಮ ಪರಿಸ್ಥಿತಿಯಲ್ಲೂ ಸಹ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳು ನಿರಂತರವಾಗಿ ಜಿಲ್ಲೆಯ ಪ್ರಮುಖ ಬೆಳೆಗಳ ನಿರ್ವಹಣೆ, ಮಾರುಕಟ್ಟೆ ಹಾಗು ಕೊಯ್ಲೋತ್ತರ ವಿಷಯಗಳ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ವಿಶ್ವ ಜೇನು ನೊಣ ದಿನ ಹಾಗು ವಿಶ್ವ ಹಾಲು ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿದ್ದಾರೆ. 2021–22 ಸಾಲಿನಲ್ಲಿ ಕೈಗೊಳ್ಳಲು ರೂಪಿಸಲಾದ ಕ್ರಿಯಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಗುಂಪು ಚರ್ಚೆಗಳು, ಕ್ಷೇತ್ರ ಭೇಟಿಗಳು, ಪದ್ಧತಿ ಪ್ರಾತ್ಯೆಕ್ಷಿಕೆಗಳು ಮತ್ತು ಸಮಸ್ಯಾತ್ಮಕ ಕ್ಷೇತ್ರಗಳಿಗೆ ಭೇಟಿನೀಡಿ ಸೂಕ್ತ ವರದಿಗಳನ್ನು ಸಲ್ಲಿಸಿರುವುದು ಶ್ಲಾಘನೀಯ.

## ವಿಶ್ವ ಜೇನು ನೊಣ ದಿನ





ಕೃಷಿ ವಿಜ್ಞಾನ ಕೇಂದ್ರ, ಕೋಲಾರವು 'ವಿಶ್ವ ಜೇನು ನೊಣ' ದಿನದ ಅಂಗವಾಗಿ ಎರಡು ಅಂತರ್ಜಾಲ ಕಾರ್ಯಕ್ರಮಗಳನ್ನು ದಿನಾಂಕ 20.05.2021 ರಂದು ಕ್ರಮವಾಗಿ ಕೃಷಿ ವಿಜ್ಞಾನ ಕೇಂದ್ರ ಚಿಂತಾಮಣಿ ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಎಸ್. ಐ. ಅಥಣಿ, ವಿಸ್ತರಣಾ ನಿರ್ದೇಶಕರು, ತೋ.ವಿ.ವಿ. ಬಾಗಲಕೋಟ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಜೇನು ಕೃಷಿಯ ಪ್ರಾಮುಖ್ಯತೆ ಕುರಿತು ತಿಳಿಸಿದರು. ತದನಂತರ, ಡಾ. ಬಿ. ಜಿ. ಪ್ರಕಾಶ್, ಡೀನ್, ತೋ.ಮ.ವಿ. ಕೋಲಾರ ರವರು ಮಾತನಾಡಿ ವಿಶ್ವ ಜೇನು ನೊಣ ದಿನದ ಮಹತ್ವದ ಕುರಿತು ತಿಳಿಸಿದರು. ಡಾ. ನರಸಾರೆಡ್ಡಿ, ಸಹಾಯಕ ಪ್ರಾಧ್ಯಾಪಕರು, ಕೃಷಿ ಮಹಾವಿದ್ಯಾಲಯ, ಚಿಂತಾಮಣಿ, ಡಾ. ಆರತಿ ಪೆನ್ನುರೆ, ಸಹಾಯಕ ಪ್ರಾಧ್ಯಾಪಕರು, ಕೃಷಿ ಮಹಾವಿದ್ಯಾಲಯ, ಚಿಂತಾಮಣಿ, ಡಾ. ಮಂಜುನಾಥ್, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೆ.ವಿ.ಕೆ. ಚಿಂತಾಮಣಿ, ಡಾ. ದೊಡ್ಡಬಸಪ್ಪ ಬಿ, ಸಹಾಯಕ ಪ್ರಾಧ್ಯಾಪಕರು (ಕೀಟಶಾಸ್ತ್ರ), ತೋ.ಮ.ವಿ, ಕೋಲಾರ ಮತ್ತು ಡಾ.ಜಿ.ಕೆ. ರಾಮೇಗೌಡ, ಸಹಾಯಕ ಪ್ರಾಧ್ಯಾಪಕರು (ಕೀಟಶಾಸ್ತ್ರ), ಪ್ರಾ.ತೋ.ಸಂ.ವಿ.ಕೇ. ಜಿಕೆವಿಕೆ, ಬೆಂಗಳೂರು ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಜೊತೆಗೆ ಶ್ರೀ. ಮಧುಕೇಶ್ವರ ಹೆಗಡೆ, ಪ್ರಗತಿಪರ ಜೇನು ಕೃಷಿಕರು, ಶಿರಸಿ ರವರು ಜೇನು ಮೌಲ್ಯವರ್ಧನೆ ಮತ್ತು ಜೇನು ಕೃಷಿ ಉದ್ದಿಮೆಯಾಗಿಸುವ ಅವಕಾಶಗಳ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. 100 ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

## ವಿಶ್ವ ಹಾಲು ದಿನಾಚರಣೆ




ಕೃಷಿ ವಿಜ್ಞಾನ ಕೇಂದ್ರ, ಕೋಲಾರ ರೈತ ಮತ್ತು ರೈತಮಹಿಳೆಯರಿಗೆ ವಿಶ್ವ ಹಾಲು ದಿನಾಚರಣೆಯ ಅಂಗವಾಗಿ ಹಾಲಿನ ಮಹತ್ವ ಹಾಗೂ ಶುದ್ಧ ಹಾಲಿನ ಉತ್ಪಾದನೆಗಾಗಿ ವೈಜ್ಞಾನಿಕ ಹೈನುಗಾರಿಕೆ ಕುರಿತು ಅಂತರ್ಜಾಲ ತರಭೇತಿಯನ್ನು ದಿ. 01.06.2021 ರಂದು ಆಯೋಜಿಸಲಾಗಿತ್ತು. ಡಾ. ಎಸ್. ಐ. ಅಥಣಿ, ವಿಸ್ತರಣಾ ನಿರ್ದೇಶಕರು, ತೋ.ವಿ.ವಿ. ಬಾಗಲಕೋಟ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಹಾಲಿನ ಪ್ರಾಮುಖ್ಯತೆ ಕುರಿತು ತಿಳಿಸಿಕೊಟ್ಟರು. ಡಾ. ರಾಘವೇಂದ್ರ, ಎಲ್, ಜಂಟಿ ನಿರ್ದೇಶಕರು, ನಂದಿನಿ ವೀರ್ಯಾಣು ಕೇಂದ್ರ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಲಿ ನಿಯಮಿತ ಮತ್ತು ಡಾ. ಪ್ರವೀಣ್ ಎ. ಆರ್. ಸಹಾಯಕ ಪ್ರಾದ್ಯಾಪಕರು, ಹೈನುಗಾರಿಕೆ ತಂತಜ್ಞಾನ, ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.





## ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು

ಕೋವಿಡ್ ವಿಷಮ ಪರಿಸ್ಥಿತಿಯಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಂಡು ಜಿಲ್ಲೆಯ ಪ್ರಮುಖ ಬೆಳೆಗಳ ನಿರ್ವಹಣೆ, ಕಟಾವು, ಬೆಳೆಗಳ ಕೊಯ್ಲೋತ್ತರ ನಿರ್ವಹಣೆ, ಮಾರುಕಟ್ಟೆ ಹಾಗೂ ಹವಾಮಾನ ಆಧಾರಿತ ಸಲಹೆಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ಹಮ್ಮಿಕೊಳ್ಳಲಾಗಿತ್ತು.














| ಅ.ಸಂ. | ದಿನಾಂಕ | ವಿಷಯ | ಭಾಗವಹಿಸಿದವರ ಸಂಖ್ಯೆ |
|---|---|---|---|
| 1 | 15.05.2021 | ಮಾವಿನಲ್ಲಿ ಕಟಾವು ಮತ್ತು ಕೊಯ್ಲೋತ್ತರ ನಿರ್ವಹಣೆ | 80 |
| 2 | 17.05.2021 | ಆಧುನಿಕ ಟೊಮ್ಯಾಟೊ ಉತ್ಪಾದನಾ ತಂತ್ರಜ್ಞಾನಗಳು | 42 |
| 3 | 18.05.2021 | ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | 100 |
| 4 | 21.05.2021 | ಗೋಡಂಬಿಯಲ್ಲಿ ಸಮಗ್ರ ಕೀಟಗಳ ನಿರ್ವಹಣೆ | 50 |
| 5 | 24.05.2021 | ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಕಳೆಗಳ ನಿರ್ವಹಣೆ | 50 |












| ಅ.ಸಂ. | ದಿನಾಂಕ | ವಿಷಯ | ಭಾಗವಹಿಸಿದವರ ಸಂಖ್ಯೆ |
|---|---|---|---|
| 6 | 26.05.2021 | ಹಿಪ್ಪುನೇರಳೆಯಲ್ಲಿ ಪ್ರಮುಖ ಕೀಟಗಳ ಸಮಗ್ರ ನಿರ್ವಹಣೆ | 50 |
| 7 | 26.05.2021 | ಕೃಷಿಯಲ್ಲಿ ಹವಾಮಾನ ಮುನ್ಸೂಚನೆ ಮತ್ತು ಹವಾಮಾನ ಆಧಾರಿತ ಕೃಷಿ ಸಲಹೆಗಳು | 25 |
| 8 | 27.05.2021 | ರೈತರ ಆದಾಯ ವೃದ್ಧಿಗಾಗಿ ದ್ವಿತಳಿ ರೇಷ್ಮೆ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳು | 75 |
| 9 | 05.06.2021 | ಸುಸ್ಥಿರ ಪರಿಸರಕ್ಕಾಗಿ ಕೃಷಿ ಅರಣ್ಯ ಪದ್ದತಿ | 35 |
| 10 | 09.06.2021 | ಗುಣಮಟ್ಟದ ದ್ವಿತಳಿ ರೇಷ್ಮೆಗೂಡು ಉತ್ಪಾದನೆಯಲ್ಲಿ ವಾಣಿಜ್ಯ ಚಾಕಿ ಸಾಕಾಣಿಕಾ ಕೇಂದ್ರಗಳ ಮಹತ್ವ ಮತ್ತು ಬಳಕೆ | 55 |













| ಅ.ಸಂ. | ದಿನಾಂಕ | ವಿಷಯ | ಭಾಗವಹಿಸಿದವರ ಸಂಖ್ಯೆ |
|---|---|---|---|
| 11 | 16.06.2021 | ಗುಣಮಟ್ಟದ ರೇಷ್ಮೆಗೂಡು ಉತ್ಪಾದನೆಗೆ ದ್ವಿತಳಿ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಹೊಸ ಆಯಾಮಗಳು | 60 |
| 12 | 17.06.2021 | ಕೃಷಿ ಬೆಳೆಗಳಲ್ಲಿ ಬೀಜೋಪಚರಣೆಯ ಪ್ರಾಮುಖ್ಯತೆ | 271 |
| 13 | 18.06.2021 | ರಾಸಾಯನಿಕ ಗೊಬ್ಬರಗಳ ವೈಜ್ಞಾನಿಕ ಉಪಯುಕ್ತತೆ ಮತ್ತು ಮಹತ್ವ | 300 |
| 14 | 22.06.2021 | ತೋಟಗಾರಿಕೆ ಬೆಳೆಗಳ ಮಾರುಕಟ್ಟೆಯ ಅವಕಾಶಗಳು ಹಾಗೂ ವಿಶ್ಲೇಷಣೆ | 50 |







## ಗುಂಪು ಚರ್ಚೆ

2021–22 ಸಾಲಿನಲ್ಲಿ ಕೈಗೊಳ್ಳಲು ರೂಪಿಸಲಾದ ಕ್ರೀಯಾ ಯೋಜನೆಗಳಾದ ವಿವಿಧ ಪದ್ಧತಿ ಪ್ರಾತ್ಯಕ್ಷಿಕೆಗಳು, ಮುಚೂಣಿ ಪ್ರಾತ್ಯಕ್ಷಿಕೆಗಳು ಮತ್ತು ಮರುಪರಿಶಿಲನಾ ಪ್ರಾತ್ಯಕ್ಷಿಕೆಗಳನ್ನು ಅನುಷ್ಠಾನಗೊಳಿಸಲು ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ದಿ. 28.06.2021 ರಂದು ಕಾಡುದೇವಾಂಡಹಳ್ಳಿಯಲ್ಲಿ ಮತ್ತು ದಿ. 29.06.2021 ರಂದು ತಿಪ್ಪಸಂದ್ರ ಗ್ರಾಮ, ಮಾಲೂರು ತಾಲುಕಿನಲ್ಲಿ ಗುಂಪು ಚರ್ಚೆಗಳನ್ನು ಹಮ್ಮಿಕೊಳ್ಳಲಾಗಿತ್ತು.





## ಹೊರಾಂಗಣದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮಗಳು

| ಅ.ಸಂ. | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | 06.04.2021 | ಬೇಸಿಗೆಯಲ್ಲಿ ದ್ವಿತಳಿ ರೇಷ್ಮೆಹುಳುಗಳ ನಿರ್ವಹಣೆ | ಜಂಗಮಗುರ್ರಜನಹಳ್ಳಿ | 30 |
| 2 | 10.04.2021 | ಮನೆ ಅಂಗಳದಲ್ಲಿ ಕೊಳಿ ಮರಿಗಳ ವೈಜ್ಞಾನಿಕ ಪಾಲನೆ | ದಳಸನೂರ, ಕಾಡುದೇವಂಡಹಳ್ಳಿ | 30 |





## ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ವಿವರ:



ದಿನಾಂಕ 25.06.2021 ರಂದು ಹಿಪ್ಪುನೇರಳೆಯಲ್ಲಿ ಸುಸ್ಥಿರ ಸೊಪ್ಪಿನ ಉತ್ಪಾದನೆಗಾಗಿ ಸುಧಾರಿತ ಬೇಸಾಯ ಕ್ರಮಗಳು ತರಭೇತಿಯಲ್ಲಿ ಡಾ. ಶಶಿಧರ್ ಕೆ. ಆರ್. ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಈ ತರಭೇತಿಯನ್ನು ಕೃಷಿ ವಿಸ್ತರಣಾ ಶಿಕ್ಷಣ ಘಟಕ, ಮುದೋಳ ಮತ್ತು ಕೃಷಿ ಇಲಾಖೆ, ಮುದೋಳ, ಸಹಯೋಗದಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 25.06.2021 ರಂದು ಐ. ಸಿ. ಎಲ್. ಇಂಡಿಯಾ ರವರು ಆಯೋಜಿಸಿದ್ದ ತರಭೇತಿ ಕಾರ್ಯಕ್ರಮದಲ್ಲಿ ಡಾ. ಅನೀಲ್ ಕುಮಾರ್ ಎಸ್. ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ತರಕಾರಿ ಬೆಳೆಗಳಲ್ಲಿ ಪೋಷಕಾಂಶಗಳ ನಿರ್ವಾಹಣೆ ಕುರಿತು ವಿಷಯ ಮಂಡಿಸಿದರು.

## ಸಮಸ್ಯಾತ್ಮಕ ಕ್ಷೇತ್ರಗಳಿಗೆ ಭೇಟಿ

| ಅ.ಸಂ. | ದಿನಾಂಕ | ಬೆಳೆ | ಸಮಸ್ಯೆ | ಸ್ಥಳ |
|---|---|---|---|---|
| 1 | 21.04.2021 | ಕೊತ್ತಂಬರಿ | ಗಿಡದ ಬೆಳವಣಿಗೆಯಲ್ಲಿ ಅಂದರೆ ಬೇರಿನ ಬೆಳವಣಿಗೆ, ಎಲೆಗಳ ಘನ ಅಳತೆ ಹಾಗು ಎತ್ತರದಲ್ಲಿ ವ್ಯತ್ಯಾಸಗಳು ಕಂಡುಬಂದಿರುವುದು | ದ್ವಾರಪಲ್ಲಿ ಗ್ರಾಮ, ಚಿಂತಾಮಣಿ ತಾಲೂಕು |
| 2 | 11.06.2021 | ತೆಂಗು | ತೆಂಗಿನ ಹೀಚು ಉದರುವಿಕೆ, ಪೋಷಕಾಂಶಗಳ ಕೊರತೆ ಹಾಗು ತೆಂಗಿನ ಮರಗಳ ಪೆನ್ಸಿಲ್ ದಪ್ಪದ ಕಾಂಡದ ಸುತ್ತಳತೆ | ಬ್ಯಾಲಹಳ್ಳಿ, ಕೋಲಾರ ತಾಲೂಕು |
| 3 | 23.06.2021 | ವೀಳ್ಯೆದೆಲೆ | ಸೋರಗು ರೋಗ ಮತ್ತು ಎಲೆ ಚುಕ್ಕೆ ರೋಗ | ಮಟ್ನೂರ, ಕೆ.ಜಿ.ಎಫ್. ತಾಲೂಕು |
| 4 | 16.06.2021 | ಟೊಮ್ಯಾಟೊ | ಹಣ್ಣಿನ ಆಕಾರದಲ್ಲಿ ಕಂಡುಬರುವ ಶಾರೀರಿಕ ನ್ಯೂನ್ಯತೆ ಕ್ಯಾಟ್ ಫೇಸ್ | ಜೋತ್ನಹಳ್ಳಿ, ಕೋಲಾರ ತಾಲೂಕು |
| 5 | 29.06.2021 | ಪೋಲ್‌ಬೀನ್ಸ್ | ಕಾಯಿ ಕೊರೆಯುವ ಹುಳದ ಬಾಧೆ | ತೊರವಲಕ್ಕಿ ಮಾಲೂರು ತಾಲೂಕು |












## ಕ್ಷೇತ್ರ ಭೇಟಿಗಳು

| ಅ.ಸಂ. | ದಿನಾಂಕ | ಬೆಳೆ | ಚರ್ಚಿತ ವಿಷಯ | ಸ್ಥಳ |
|---|---|---|---|---|
| 1 | **21.04.2021** | ಟೊಮ್ಯಾಟೊ | ಬೇಸಿಗೆಯಲ್ಲಿ ಉಷ್ಣತೆಯಿಂದ ಸಸಿಗಳನ್ನು ಕಾಪಾಡುವ ಬಗೆ | ರೋಣೂರು ಕೊಲಾರ ತಾಲೂಕು |
| 2 | **11.06.2021** | ಟೊಮ್ಯಾಟೊ | ಪೋಷಕಾಂಶಗಳ ನಿರ್ವಹಣೆ | ಬ್ಯಾಲಹಳ್ಳಿ, ಕೋಲಾರ ತಾಲೂಕು |
| 3 | **14.06.2021** | ಮಾವು ಮಾಗಿಸುವಿಕೆ ಕೇಂದ್ರ | ರೈತರಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಕುರಿತು ಚರ್ಚೆ | ಶ್ರೀನಿವಾಸಪುರ |
| 4 | **28.06.2021** | ಸಿಓಎಫ್ಎಸ್–31 ಮೇವಿನ ತಾಕು, ಹಿಪ್ಪುನೇರಳೆ ತೋಟ ಮತ್ತು ಕಮಲಂ ತೋಟಗಳು | ಸುಧಾರಿತ ಬೇಸಾಯ ಕ್ರಮಗಳು | ಕಾಡುದೇವಾಂಡಹಳ್ಳಿ |












## ಪದ್ಧತಿ ಪ್ರಾತ್ಯಕ್ಷಿಕೆಗಳು

| ಅ.ಸಂ. | ದಿನಾಂಕ | ವಿಷಯ | ಸ್ಥಳ |
|---|---|---|---|
| 1 | 23.06.2021 | ನೆಲಗಡಲೆಯಲ್ಲಿ ಬೀಜೋಪಚರಣೆಯ ಮಹತ್ವ | ಬಂಡಿಗಾನಹಳ್ಳಿ, ಬಂಗಾರಪೇಟೆ |



## ದ್ವೈಮಾಸಿಕ ಸಭೆ

ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಕೃಷಿ ಇಲಾಖೆ, ಕೋಲಾರ ಮತ್ತು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರ ಸಹಯೋಗದಲ್ಲಿ ದ್ವೈಮಾಸಿಕ ಸಭೆಯನ್ನು ದಿನಾಂಕ 28.05.2021 ರಂದು ಅಂತರ್ಜಾಲದ ಮೂಲಕ ಆಯೋಜಿಸಲಾಗಿತ್ತು. ಜಿಲ್ಲೆಯ ಪ್ರಮುಖ ಕೃಷಿ ಬೆಳೆಗಳಾದ ನೆಲಗಡಲೆ, ರಾಗಿ ಮತ್ತು ತೊಗರಿ ಬೆಳೆಗಳಲ್ಲಿ ಸುಧಾರಿತ ಬೇಸಾಯ ಕ್ರಮಗಳು ಹಾಗು ಪ್ರಮುಖ ತೋಟಗಾರಿಕೆ ಬೆಳೆಗಳ ಕುರಿತು ಚರ್ಚಿಸಲಾಯಿತು. ಈ ಸಭೆಯಲ್ಲಿ ಡಾ. ಕೆ. ನಾರಯಣಗೌಡ, ಸಹಾ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರು ಬಾಗವಹಿಸಿ ಅಧಿಕಾರಿಗಳಿಗೆ ನೂತನ ತಾಂತ್ರಿಕತೆಗಳನ್ನು ರೈತರಿಗೆ ತಲುಪಿಸಲು ಕರೆ ನೀಡಿದರು.

## ಪತ್ರಿಕಾ ಪ್ರಕಟಣೆ


ಗೋಡಂಬಿ ಬೆಳೆಯಲ್ಲಿ ಸಮಗ್ರ ಪೀಡೆ ನಿರ್ವಹಣೆ ಕಾರ್ಯಾಗಾರ

ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್ ಅಭಿಪ್ರಾಯ

ತಾಂತ್ರಿಕ ನೆರವಿನಿಂದ ರೇಷ್ಮೆ ಕೃಷಿ ಲಾಭದಾಯಕ

ಮಾವು ಕಟಾವು ಮಾಗಿಸುವಿಕೆ ಕಾರ್ಯಾಗಾರ

ಮಾವಿನ ಬಗ್ಗೆ ಅಂತರ್ಜಾಲ ತರಬೇತಿ


| | |
|---|---|
| ಸಂಪಾದಕರು | : ಕೆ. ತುಳಸಿರಾಮ್ |
| ಸಹ ಸಂಪಾದಕರು | : ಡಾ. ಜ್ಯೋತಿ ಕಟ್ಟೇಗೌಡರ |
| ಸಹಾಯಕ ಸಂಪಾದಕರು | ಡಾ. ಅನಿಲ್ ಕುಮಾರ್. ಎಸ್.<br>ಡಾ. ಅಂಬಿಕಾ ಡಿ. ಎಸ್.<br>ಡಾ. ಶಶಿಧರ್ ಕೆ.ಆರ್<br>ಡಾ. ಚಿಕ್ಕಣ್ಣ ಜಿ.ಎಸ್<br>ಶ್ರೀ. ಉಮೇಶ ನಾಯ್ಕ<br>ಶ್ರೀಮತಿ. ಸ್ವಾತಿ ಜಿ. ಆರ್. |
| ಪುಟ ವಿನ್ಯಾಸ | :ಶ್ರೀಮತಿ. ಸಿ.ಎಸ್. ಜ್ಞಾನಸುಧಾ |
| ಅಕ್ಷರ ಜೋಡಣೆ | :ಶ್ರೀಮತಿ. ಸಾವಿತ್ರಿ ಜಿ. ರುದ್ರಾಪೂರ |
| ಸಹಾಯಕರು | :ಶ್ರೀ. ರವಿಶಂಕರ್ ಹೆಚ್.ಎಂ. |

ಪ್ರಕಾಶಕರು
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು,
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,
ಕೋಲಾರ– 563 103.





ಪ್ರತಿ ಸೋಮವಾರ ರೈತರಿಗೆ ಪರಿಹಾರ
ಸ್ಥಳ: ಕೃಷಿ ವಿಜ್ಞಾನ ಕೇಂದ್ರ ಕೋಲಾರ.
ಸಮಯ: ಬೆಳಿಗ್ಗೆ 9.00 ರಿಂದ ಸಂಜೆ: 5.00